# ಮಕ್ಕಳ ಸಾಧನೆಯೂ, ಪೋಷಕರ ನಿರ್ಲಕ್ಷ್ಯವೂ..

ಮಕ್ಕಳ ಶೈಕ್ಷಣಿಕ ಚಟುವಟಿಕೆಗಳಲ್ಲಿ ಪೋಷಕರ ಪಾಲ್ಗೊಳ್ಳುವಿಕೆ ಕಡಿಮೆಯಾಗುತ್ತಿದೆ. ಎನ್‌ಸಿಇಆರ್‌ಟಿ ಇತ್ತೀಚೆಗೆ ದೇಶದಾದ್ಯಂತ ನಡೆಸಿದ ಸಮೀಕ್ಷೆಯೂ ಈ ಅಂಶವನ್ನು ದೃಢಪಡಿಸಿದೆ. ಹೀಗೇಕೆ ಆಗುತ್ತಿದೆ?

ಪ್ರಾಥಮಿಕ ಹಂತದ ಶಿಕ್ಷಣದಲ್ಲಿ ಮಕ್ಕಳ ಸಾಧನೆ ಅವರ ಮುಂದಿನ ಹಂತದ ಶೈಕ್ಷಣಿಕ ಸಾಧನೆಗಳ ಮುನ್ಸೂಚನೆಯೂ ಹೌದು. ಸಾಮಾನ್ಯವಾಗಿ ಈ ಹಂತದಲ್ಲಿ ಪೋಷಕರು ಮಕ್ಕಳ ಜತೆಗೆ ಕುಳಿತು ಶಾಲೆಯ ವಿಷಯಗಳ ಬಗ್ಗೆ ಮತ್ತು ಶಾಲೆಯ ಇತರ ಚಟುವಟಿಕೆಗಳ ಬಗ್ಗೆ ಚರ್ಚಿಸಬೇಕು. ಮಕ್ಕಳ ಹೋಮ್‌ವರ್ಕ್, ಪಠ್ಯೇತರ ಚಟುವಟಿಕೆಗಳಲ್ಲಿ ಖುದ್ದು ಆಸಕ್ತಿ ತೆಗೆದುಕೊಂಡು ಪೋಷಕರು ತಾವೂ ಪಾಲ್ಗೊಳ್ಳಬೇಕು. ವಿಷಯಗಳ ಗ್ರಹಣಶಕ್ತಿ, ಕಲಿಯುವಿಕೆಯಲ್ಲಿ ಗೊಂದಲಗಳ ನಿವಾರಣೆ ಮತ್ತು ಕಲಿಕೆಯ ಗುಣಮಟ್ಟ ಹೆಚ್ಚಳಕ್ಕೆ ಈ ಕ್ರಮಗಳು ಸಾಕಷ್ಟು ನೆರವಾಗುತ್ತವೆ. ಶಾಲೆಗಳಲ್ಲಿ ನಡೆಯುವ ಎಲ್ಲ ಚಟುವಟಿಕೆಗಳನ್ನು ಪೋಷಕರ ಜತೆ ಮಕ್ಕಳು ಹಂಚಿಕೊಳ್ಳುವ ವಾತಾವರಣ ಇರುವಂತೆ ಪೋಷಕರು ನೋಡಿಕೊಳ್ಳಬೇಕು. ಹಾಗಿದ್ದಾಗ ಮಕ್ಕಳು ತಮ್ಮ ಪ್ರತಿಭೆಯನ್ನು ಸೂಕ್ತ ರೀತಿಯಲ್ಲಿ ಪ್ರಕಟಿಸಲು ಸಾಧ್ಯವಾಗುತ್ತದೆ. ಮಕ್ಕಳ ಗರಿಷ್ಠ ಸಾಮರ್ಥ್ಯವನ್ನು ಹೊರತೆಗೆಯುವುದೂ ಸುಲಭವಾಗುತ್ತದೆ.

ನಮ್ಮಲ್ಲಿ ಇತ್ತೀಚೆಗೆ ಏನಾಗುತ್ತಿದೆಯೆಂದರೆ, ಪೋಷಕರು ಮಕ್ಕಳ ಶೈಕ್ಷಣಿಕ ವಿಷಯಗಳಲ್ಲಿ ಪಾಲ್ಗೊಳ್ಳಲು ಸಮಯ ಸಾಲುವುದಿಲ್ಲ. ಗಂಡ ಹೆಂಡತಿ ಇಬ್ಬರೂ ದುಡಿಯಲು ಹೋಗುವ ಕುಟುಂಬಗಳಲ್ಲಂತೂ ಇದು ಸಾಕಷ್ಟು ಸಮಸ್ಯೆಗಳನ್ನು ಉಂಟು ಮಾಡುತ್ತಿದೆ. ನಗರಗಳಲ್ಲಿ ಟ್ಯೂಷನ್ ಮಾಫಿಯಾಕ್ಕೆ ಇದೂ ಒಂದು ಅನುಕೂಲಕರ ಸಂಗತಿ. ಶಾಲೆಯಿಂದ ಬಂದ ಮಕ್ಕಳು ಮನೆಯ ಪಕ್ಕದಲ್ಲೇ ಇರುವ ಟ್ಯೂಷನ್ ಕ್ಲಾಸಿಗೆ ಹೋಗಿ ಕುಳಿತುಕೊಳ್ಳುತ್ತಾರೆ. ಅಮ್ಮ ಅಥವಾ ಅಪ್ಪ ಮನೆಗೆ ಬರುವವರೆಗೆ ಟ್ಯೂಷನ್ ತರಗತಿಗಳೇ ಅವರಿಗೆ ಆಶ್ರಯ. ಕಚೇರಿಯಿಂದ ಬಂದ ಅಪ್ಪ– ಅಮ್ಮನಿಗೆ ರಾತ್ರಿ ಮನೆಕೆಲಸದ ಧಾವಂತ. ಅದರ ನಡುವೆ ಸಮಯ ಸಿಕ್ಕಿದರೆ, ಮಕ್ಕಳ ಶಾಲೆಯ ಸಂಗತಿಗಳತ್ತ ಗಮನಹರಿಸಲು ಸಾಧ್ಯವಾಗುವುದು. ಕೆಲಸಕ್ಕೆ ಹೋಗದೆ ಮನೆಯನ್ನು ಸಂಭಾಳಿಸುವ ಗೃಹಿಣಿಯರಲ್ಲಿ ಈ ಒತ್ತಡ ಸ್ವಲ್ಪ ಕಡಿಮೆ. ಮಕ್ಕಳಿಗೆ ಸಾಕಷ್ಟು ಸಮಯ ಕೊಡಲು ಅವರಿಗೆ ಸಾಧ್ಯವಾಗುತ್ತದೆ. ಆದರೆ ಇತ್ತೀಚೆಗೆ ಮನೆ ಮನೆಗಳಲ್ಲೂ ಹಬ್ಬಿರುವ ಟೀವಿ ಧಾರಾವಾಹಿಗಳ ಜ್ವರದಿಂದಾಗಿ ಅಲ್ಲೂ ಸಮಸ್ಯೆಯ ಇನ್ನೊಂದು ಮುಖ ಬಿಚ್ಚಿಕೊಳ್ಳುತ್ತಿದೆ. ಧಾರಾವಾಹಿಗಳ ಪ್ರಭಾವ ಮಕ್ಕಳ ಕಲಿಕೆಯ ಮೇಲೂ ಆಗುತ್ತಿದೆ.

ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿಯ ರಾಷ್ಟ್ರೀಯ ಮಂಡಳಿ (ಎನ್‌ಸಿಇಆರ್‌ಟಿ) ಇತ್ತೀಚೆಗೆ ದೇಶದಾದ್ಯಂತ ನಡೆಸಿದ ಸಮೀಕ್ಷೆಯೂ ಪ್ರಾಥಮಿಕ ಶಾಲೆಯ ಮಕ್ಕಳ ಶೈಕ್ಷಣಿಕ ಚಟುವಟಿಕೆಗಳಲ್ಲಿ ಪೋಷಕರ ಪಾಲ್ಗೊಳ್ಳುವಿಕೆ ಕಡಿಮೆ ಆಗಿರುವುದನ್ನು ದೃಢಪಡಿಸಿದೆ. ಎನ್‌ಸಿಇಆರ್‌ಟಿ ಯು 3ನೇ, 5ನೇ ಮತ್ತು 8ನೇ ತರಗತಿಯ ಮಕ್ಕಳ ಕಲಿಕಾ ಮಟ್ಟವನ್ನು ಅಂದಾಜು ಮಾಡಲು ಇದೇ ಮೊದಲ ಬಾರಿಗೆ ಇಂತಹ ಸಮೀಕ್ಷೆಯನ್ನು ನಡೆಸಿದೆ. 36 ರಾಜ್ಯಗಳ 701 ಜಿಲ್ಲೆಗಳ ಸರಕಾರಿ ಮತ್ತು ಸರಕಾರದ ಅನುದಾನಿತ ಶಾಲೆಗಳಲ್ಲಿ ನಡೆಸಿದ ಈ ಸಮೀಕ್ಷೆಯು ಹಲವು ಹೊಸ ಸಂಗತಿಗಳತ್ತ ಬೊಟ್ಟು ಮಾಡಿದೆ. 1.10 ಲಕ್ಷ ಶಾಲೆಗಳ 22 ಲಕ್ಷ ವಿದ್ಯಾರ್ಥಿಗಳು ಮತ್ತು ಸಾವಿರಾರು ಶಿಕ್ಷಕರು ಈ ಸಮೀಕ್ಷಾ ಪರೀಕ್ಷೆಯಲ್ಲಿ ಪಾಲ್ಗೊಂಡಿರುವ ಹಿನ್ನೆಲೆಯಲ್ಲಿ ಈ ಮಾಹಿತಿಗಳ ವಿಶ್ವಾಸಾರ್ಹತೆ ಬಗ್ಗೆ ಅನುಮಾನ ಪಡುವಂತಿಲ್ಲ. ಕರ್ನಾಟಕದಲ್ಲಿ 3ನೇ ತರಗತಿಯ 36820 ಮಕ್ಕಳು, 5ನೇ ತರಗತಿಯ 38651 ಮಕ್ಕಳು ಹಾಗೂ 8ನೇ ತರಗತಿಯ 47021 ಮಕ್ಕಳು ಮತ್ತು ಒಟ್ಟು 16332 ಶಿಕ್ಷಕರು ಈ ಪರೀಕ್ಷೆಯಲ್ಲಿ ಭಾಗವಹಿಸಿದ್ದಾರೆ.

ಮಕ್ಕಳ ಶೈಕ್ಷಣಿಕ ಸಾಧನೆಗಳಲ್ಲಿ ಶೇಕಡಾ 20ರಷ್ಟು ಪೋಷಕರು ಪಾಲು ತೀರಾ ಕಡಿಮೆ; ಶೇಕಡಾ 54ರಷ್ಟು ಪೋಷಕರು ಸಾಧಾರಣ ಆಸಕ್ತಿ ತೋರಿಸಿದ್ದಾರೆ ಎನ್ನುವುದು ಶಿಕ್ಷಕರ ಅಭಿಮತ. ಹಾಗೆಯೇ ಮಕ್ಕಳ ಶಾಲಾ ಚಟುವಟಿಕೆಗಳಲ್ಲಿ ಶೇಕಡಾ 26ರಷ್ಟು ಪೋಷಕರು ತೀವ್ರ ನಿರಾಸಕ್ತಿ ತೋರುತ್ತಿದ್ದರೆ, ಶೇಕಡಾ 52ರಷ್ಟು ಪೋಷಕರು ಸಾಧಾರಣ ಆಸಕ್ತಿ ತೋರಿಸುತ್ತಿದ್ದಾರೆ ಎಂದೂ ಶಿಕ್ಷಕರು ಅಭಿಪ್ರಾಯ ದಾಖಲಿಸಿದ್ದಾರೆ. ರಾಜ್ಯದಲ್ಲಿ ಶೇಕಡಾ 26ರಷ್ಟು ಪೋಷಕರು ಮಕ್ಕಳ ಶೈಕ್ಷಣಿಕೆ ಸಾಧನೆಗಳಲ್ಲಿ ಹೆಚ್ಚಿನ ಆಸಕ್ತಿ ತೋರಿದ್ದರೆ, ಶಾಲಾ ಚಟುವಟಿಕೆಗಳ ಬಗ್ಗೆ ಹೆಚ್ಚು ಆಸಕ್ತಿ ತೋರಿದ ಪೋಷಕರ ಶೇಕಡಾವಾರು ಕೇವಲ 22 ಮಾತ್ರ. ಎನ್‌ಸಿಇಆರ್‌ಟಿಯ ಈ ಸಮೀಕ್ಷೆಯ ಅಂಶಗಳತ್ತ ನಮ್ಮ ಶೈಕ್ಷಣಿಕ ವಲಯ ಗಂಭೀರ ಗಮನಹರಿಸಬೇಕಾದ ಅಗತ್ಯವಿದೆ. ಪೋಷಕರು ಪ್ರಾಥಮಿಕ ಹಂತದಲ್ಲಿಯೇ ಮಕ್ಕಳ ಶಿಕ್ಷಣ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಹೆಚ್ಚು ಉತ್ಸಾಹದಿಂದ ತೊಡಗುವಂತಾಗಲು ಕಾಳಜಿ ವಹಿಸಬೇಕಿದೆ.



■ ಬಿ.ಎಂ. ಹನೀಫ್